# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಿದ್ದಾಪುರ

**ಸಿ ಸಿ ನಂ. 311/2024**

| ಫಿರ್ಯಾದುದಾರರು | ವಿರುದ್ಧ | ಆರೋಪಿತರು |
|---|---|---|
| ಸಿದ್ದಾಪುರ ಪೊಲೀಸ್ ಠಾಣೆ. | | 1. ಮಹಮ್ಮದ್ ಕೈಫ್ ತಂದೆ ಅಬುಬಕ್ಕರ್ ಸಾಬ್<br>ಪ್ರಾಯಃ 19 ವರ್ಷ, ವೃತ್ತಿಃ ವಿದ್ಯಾರ್ಥಿ , ವಾಸಃ ವಿವೇಕಾನಂದ ನಗರ, ಕಾನಸೂರು, ಸಿದ್ದಾಪುರ ತಾಲೂಕು , ಉ ಕ ಜಿಲ್ಲೆ<br>2. ಚಂದನ ತಂದೆ ಶ್ರೀಧರ ಆಚಾರಿ<br>ಪ್ರಾಯಃ 19 ವರ್ಷ, ವೃತ್ತಿಃ ವೆಲ್ಡಿಂಗ್ ಕೆಲಸ , ವಾಸಃ ಬಾಳೇಸರ ರೋಡ್ , ಕಾನಸೂರು, ಸಿದ್ದಾಪುರ ತಾಲೂಕು , ಉ ಕ ಜಿಲ್ಲೆ |

## ಃ ದೋಷಾರೋಪಣೆ ಃ

ಶ್ರೀ. ಭರತ ಚಂದ್ರ ಕೆ ಎಸ್ . ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ದಾಪುರ ಆದ ನಾನು ಈ ಮೂಲಕ ನಿಮ್ಮ ಮೇಲೆ ಹೊರಿಸಿದ ದೋಷಾರೋಪಣೆ ಏನೆಂದರೆ,

ಸಿದ್ದಾಪುರ ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಸಿದ್ದಾಪುರ ತಾಲೂಕಿನಹಾರ್ಸಿಕಟ್ಟಾ ಗ್ರಾಮ ಪಂಚಾಯತ್ ವ್ಯಾಪ್ತಿಯ ವಾಜಗದ್ದೆ ದುರ್ಗಾ ವಿನಾಯಕ ದೇವಸ್ಥಾನದ ಮುಂಭಾಗದಲ್ಲಿ ಅಳವಡಿಸಿದ ಸೋಲಾರ್ ಬೀದಿ ದೀಪದ ಕಂಬದಲ್ಲಿ ದಿಃ 13-08-2024 ರಂದು ಬೆಳಗಿನ ಜಾವ 05-30 ಗಂಟೆ ಸುಮಾರಿಗೆ ಆರೋಪಿತರಾದ 1) ಮಹಮ್ಮದ್ ಕೈಫ್ ತಂದೆ ಅಬುಬಕ್ಕರ್ ಸಾಬ್ 2)ಚಂದನ ತಂದೆ ಶ್ರೀಧರ ಆಚಾರಿ ಆದ ನೀವುಗಳು ನಿಮ್ಮ ಬಾಬ್ತು ಮೊಟಾರ್ ಸೈಕಲ್ ನಂ. ಕೆ ಎ 31/ಇಸಿ 8627 ನೇದರ ಮೇಲಾಗಿ ಹೋಗಿ KOEL GREEN KG100A ಬಿಳಿ ಮತ್ತು ನೀಲಿ ಬಣ್ಣದ 12 ವೋಲ್ಟ್ ಬ್ಯಾಟರಿ ರೂ.7000/- ನ್ನು ಕಳ್ಳತನ ಮಾಡಿದ್ದಲ್ಲದೇ , ದಿಃ19-08-2024 ರಂದು ಸಂಜೆ 4-30 ಗಂಟೆ ಸುಮಾರಿಗೆ ನಿಮ್ಮ ಬಾಬ್ತು ಮೊಟಾರ್ ಸೈಕಲ್ ನಂ. ಕೆ ಎ 31/ಇಸಿ 8627 ನೇದರ ಮೇಲಾಗಿ ಹೋಗಿ ಹಾರ್ಸಿಕಟ್ಟಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಮುತ್ತಳ್ಳಿ ಗ್ರಾಮದ ಎಸ್ ಸಿ ಕೇರಿಯ ಸುಧಾಕರ ಮಡಿವಾಳ ಮನೆಯ ಹತ್ತಿರ ಅಳವಡಿಸಿದ ಸೋಲಾರ್ ಬೀದಿ ದೀಪದ ಕಂಬದಲ್ಲಿನ KOEL GREEN KG100A ಬಿಳಿ ಮತ್ತು ನೀಲಿ ಬಣ್ಣದ 12 ವೋಲ್ಟ್ ಬ್ಯಾಟರಿ ರೂ.7000/- ನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು , ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 303(2) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದೀರೆಂದು ದೋಷಾರೋಪಿಸಲಾಗಿದೆ.

ಪ್ರಶ್ನೆಃ ಈ ಮೇಲೆ ಓದಿ ಹೇಳಲಾದ ದೋಷಾರೋಪಣೆಯು ನಿಮಗೆ ತಿಳಿಯಿತೇ?

ಉತ್ತರಃ 1 ನೇ ಆರೋಪಿಃ ತಿಳಿಯಿತು.

2 ನೇ ಆರೋಪಿಃ ತಿಳಿಯಿತು.

ಪ್ರಶ್ನೆಃ  ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ವಿಚಾರಣೆ ಬಯಸುವಿರೋ?

ಉತ್ತರಃ 1 ನೇ ಆರೋಪಿಃ ವಿಚಾರಣೆ ಆಗಬೇಕು

2 ನೇ ಆರೋಪಿಃ ವಿಚಾರಣೆ ಆಗಬೇಕು

(ಮೇಲಿನ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ಕೊಟ್ಟ ಉತ್ತರವನ್ನು ಅದೇ ರೀತಿ ದಾಖಲಿಸಿಕೊಳ್ಳಲಾಯಿತು ).

ಸಹಿ ಇದೆ

ದಿನಾಂಕಃ 09-01-2025

ಪ್ರ.ದ.ನ್ಯಾ. ದಂಡಾಧಿಕಾರಿ,
ಸಿದ್ದಾಪುರ .